ಮೈಸೂರು ಡಿಸ್ಟ್ರಿಕ್ಟ್.

ತಾರೀಖು 17ನೇ ಏಪ್ರಿಲ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ತಿರುಮಕೂಡ್ಲು ನರಸೀಪುರ ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಬೇವಾರಸಾಗಿ ಇರತಕ್ಕ ಕೆಳಗೆ ವಿವರಿಸೋಣಾದ ದಸ್ತಾವೇಜನ್ನು ಹಾಜರ್ಮಾಡಿದವನೇ ಆಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವನಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರನಾಗಲಿ ಈ ನೋಟೀಸ್ ತಾರೀಖು ಲಾಗಾಯುತು ಎಂದು ತಿಂಗಳ ವಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅದನ್ನು ವಾಪಸ್ ತೆಗದುಕೊಳ್ಳಬೇಕು, ತಪ್ಪಿದರೆ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟ್ 85ನೇ ಸೆಕ್ಷನ್ ಅನುಸರಿಸಿ ಅದು ನಾಶ ಪಡಿಸಲ್ಪಡುವದು.

ನಂಬರ್.	ದಸ್ತಾವೇಜು ಬರದುಕೊಟ್ಟವನ ಹೆಸರು ಮತ್ತು ವಾಸಸ್ಥಳ.	ಬರಿಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರೇಷನ್ ಮಾಡಿಸಿದ ತಾರೀಖು.	ರಿಜಿಸ್ಟರ್ ಆದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
741 ——— 81—82ನೇ ಇಸವಿ	ಮೈಸೂರನಲ್ಲಿ ಇರುವ ಸ್ಮಾರ್ತ ಬ್ರಾಹ್ಮಣ ಮುದುಗಂದೂರು ಕಪನಯ್ಯನವರ ಮೊಮ್ಮಗ ಅರಮನೆ ನೌಕರೀಯಿಂದ ಜೀವಿಸುವ ವೆಂಕಟಭಟ್ಟ.	ತಲಕಾಡು ತಾಲ್ಲೂಕು ಜೋಡಿ ಬೊಮ್ಮನಾಯಕನಹಳ್ಳಿಯಲ್ಲಿ ಇರುವ ಕುರುಬ ಕೊಂಡಂಗಿ ಮಾದೇಗೌಡನ ಮಗ ಕೂಲಿ ಜೀವನದ ಬಸವೇಗೌಡ.	18—3—82	18—3—82	(300) ರೂಪಾಯಿನ ಭೂಸ್ತಿತಿ ಆಧಾರ ಪತ್ರ.

ಅಬ್ದುಲ್ ಖಾದರ್, ಕೆ. ಬಿ., ರಿಜಿಸ್ಟ್ರಾರ್.

ಶಿವಮೊಗ್ಗ ಡಿಸ್ಟ್ರಿಕ್ಟ್.

ತಾರೀಖು 21ನೇ ಏಪ್ರಿಲ್ 1884ನೇ ಇಸವಿ.

ನಗರದಲ್ಲಿ ಯಿರುವ ನೀಲಕೆಂಠೇಶ್ವರ ದೇವಸ್ಥಾನ 1, ಸೊರಬ ತಾಲ್ಲೂಕು ಜಂಬಗುತ್ತಿ ರೇಣಕಾಮ್ಮನವರ ದೇವಸ್ಥಾನ 1, ಈ 2 ದೇವಸ್ಥಾನಗಳ ಬಾಬತು ಭಂಗಾರ ಬೆಳ್ಳಿ, ವಗೈರೆ ಬಾಬತು ನಗಗಳು, ಪಿತ್ತಾಳೆ, ತಾಂಬ್ರ, ಕಂಚು, ಖಬ್ಬಣ ಇವುಗಳ ಬಾಬತು ಪಾತ್ರೆ ಸಾಮಾನುಗಳು ಜವಳಿ ಬಟ್ಟೆಗಳು ಯಿವಗಳನ್ನೆಲ್ಲಾ ಸ್ಯ ಮಜಕೂರ್ ಮೇ ತಾರೀಖು 27ನೇ ಮಂಗಳವಾರ ಹಗಲು 12 ಘಂಟೆ ಸಮಯದಲ್ಲಿ ಶಿವಮೊಗ್ಗೆಯಲ್ಲಿ ಡಿಸ್ಟ್ರಿಕ್ಟ್ ಟ್ರೆಜರೀ ಆಫೀಸಿನಲ್ಲಿ ಪೋಟೊ ಪೋಟೀಯಿಂದ ಹರಾಜು ಹಾಕಿಸುತ್ತಾದ ವ್ಯಯುಕ್ತ ಚಡ ದರಖಾಸ್ತಿನಿಂದ ಮೊಬಲಗು ಕೂಡ್ಲೇ ಹಾಜರ್ ಮಾಡಿ ಮಾಲ್ ಪಡಿಯುವದಕ್ಕೆ ಇಷ್ಟ ಉಳ್ಳಂಥಾ ಸಮಸ್ತ ಜನರೂ ಸದರೀ ಸವಾಯಕ್ಕೆ ಡಿಸ್ಟ್ರಿಕ್ಟ್ ಆಫೀಸ್ ಬಳಿ ಹಾಜರ್ ಯಿರಬೇಕು.

ಆಕ್ಶೈರ್ ದರಖಾಸ್ತುದಾರರು ಆ ಬಾಬತು ಮೊಬಲಗು ಹಾಜರ್ ಮಾಡುವದಕ್ಕೆ ತಪ್ಪಿದರೆ ಅಂಥಾ ಮಾಲ್‌ಗಳನ್ನು ಪುನಹ ಹರಾಜು ಮಾಡಿಸಿ ಕಮ್ಮಿ ಆಗುವ ಮೊಬಲಗು ಸುಳು ದರಖಾಸ್ತುದಾರನಿಂದ ವಸೂಲ್ ಮಾಡುವದರಲ್ಲಿ ಬರುತ್ತೆ.

ಪಿ. ಪಂಚನಾಥರಾವ್,
ಫಾರ್ ಡೆಪ್ಯೂಟಿ ಕಮ್ಮಿಷನರ್.

ಕಡೂರು ಡಿಸ್ಟ್ರಿಕ್ಟ್.

ಕಡೂರು ಡಿಸ್ಟ್ರಿಕ್ಟ್ ಸಬಾರ್ಡಿನೇಟ್ ಜಡ್ಜ್‌ರಯವರ ಕೋರ್ಟ್‌ನಲ್ಲಿ.

ದಿವಾನೀಯಾದ ಡಿಕ್ರಿ ದೇಶೀದಾರ ಬೇಲೂರು ತಾಲ್ಲೂಕು ಅರೇಹಳ್ಳಿ ಹೋಬಳಿ ಮಲ್ಲಾಪುರ ಮಜರೆಲ್ಲಿ ಇರುವ ನಿವಾಚಾರದ ಪುಲ್ಲಕಾರ್ಜುನ ಪಡೆಯರ ಜಡ್ಜ್‌ಮೆಂಟ್-ಡೆಟರ್ ವಿಷಯದಲ್ಲಿ—

ಈ ವಿಷಯವು ಸಬಾರ್ಡಿನೇಟ್ ಜಡ್ಜ್ ಬಿ. ತಿರುಮಾಲಾಚಾರ್ಯರ ರೂಬರೂ ದಿವಾಳಿಯಾದವನ ತರಫ ಪ್ಲೀಡರ್ ವೆಂಕಟರಮಣಯ್ಯ ನವರ ಸಮಕ್ಷಮದಲ್ಲಿಯೂ ಮತ್ತು ದಿವಾಳೀದಾರನ ಟೀಕೇದಾರರಾದ 1 ರಾವ್‌ದಾಸಪ್ಪ, 2 ಲಬ್ಬೆ ಮಹಮ್ಮದಖನೀ, 3ನೇ ದೇವಪ್ಪ, 4ನೇ ಖಾಜಿ ಮಹಮ್ಮದಲ್ಲಿ, 5ನೇ ಸಿ. ಶ್ರೀನಿವಾಸಯ್ಯಂಗಾರ್, 6ನೇ ಪಟೇಲ್ ಬಸವೇಗೌಡ ಇವರ ಎದುರಾಗಿಯೂ ದರ್ಯಾಪ್ತ್ತೀ ಮಾಡಲ್ಪಟ್ಟಿತು.

ಮತ್ತು ಸ್ 1884ನೇ ಇಸವಿ ಏಪ್ರಿಲ್ 8ನೇ ತಾರೀಖಿನ ಬಾಬತು ರಿಸೀವರಾದ ನಂಜಪ್ಪನ ಸರಟಿಫಿಕೇಟ್ ಬದಲಾಯಿತು. ಇದೇ ವಿಷಯದಲ್ಲಿ ಸ್ 1884ನೇ ಇಸವಿ ಜನವರೀ 30ನೇ ತಾರೀಖಿನಲ್ಲಿ ಈ ಕೋರ್ಟುನಿಂದ ಮಾಡಲ್ಪಟ್ಟ ಹುಕ್ಕುಂ ಮೇರಿಗೆ ಪಟ್ಟಯಲ್ಲಿ ಕಂಡ ಯಾವ ಸಾಲಗಾರಿಗೂ ಅರ್ಜ ದಿವಾಳೀಯಾದವನ್ನ ದುಲ್ಲಾ ಜವಾಬುದಾರಿಯಿಂದಲೂ ನಿಖಾಲಸ್ಮಾಡಿರುವದಲ್ಲದೆ ಆ ಬಗ್ಯೆ ಸಧರೀಯವನ್ನ ದಸ್ತಗಿರಿ ಮಾಡಿ ಕೈದು ಮಾಡುವದರ ದೆಕೆಯಿಂದಲೂ ಬಿಡಗಡೆಮಾಡಿ ಇರುವದಾಗಿ ಇದರಿಂದ ಹುಕ್ಕುಂ ಮಾಡಲ್ಪಟ್ಟಿತು ಇಥೆ.

ಸ್ 1884ನೇ ಇಸವಿ ಏಪ್ರಿಲ್ ತಾರೀಖು 8ರಲ್ಲಿ ಕೋರ್ಟು ಮೊಹರ್. ನಮ್ಮ ದಸ್ತಖತ್ತುನಿನಿ ಕೊಡಲ್ಪಟ್ಟಿಥೆ.

ತಾರೀಖು 8ನೇ ಏಪ್ರಿಲ್ 1884.

ಸ್ 1860ನೇ ಇಸವಿ 27ನೇ ಆಕ್ಟು ಪ್ರಕಾರ ವಾರಸ್ ಸರಟಿಫಿಕೇಟ್ ಕೊಟ್ಟದ್ದು ವಾಯಿದೆ ಪ್ರಕಾರ ಪ್ರಮಾಣ ಪತ್ರಿಕೆ ಹಾಜರ್ ಮಾಡದ್ದರಿಂದ ಸರಟಿಫಿಕೇಟ್ ರದ್ದುಮಾಡಿದ ಲಿಸ್ಟು:—

ಮೊಕದ್ದಮ ನಂಬರ್.		ಯಾರಿಗೆ.	ಯಾರಿಗೋಸ್ಕರ.
1881	ಮಿಸಲೆನಿಯಸ್ ಕೇಸ್ ನಂ. 101	ಮೂಡಗೆರೆ ದಾವೂದ್‌ಸಾಬಿ.	ಮೃತಪಟ್ಟ ಹುಸೇನ್‌ಸಾಬನಿಗೆ ಬರತಕ್ಕ ವುದ್ರಿ 15,000 ರೂಪಾಯಿ ವಸೂಲಿಗೆ

ಬಿ. ತಿರುಮಲಾಚಾರಿ,
ಸಬ್‌ಜಡ್ಜ.

ಗವರ್ಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ್ಯರ್ಥಾರ್ಥವಾಗಿ ಗವರ್ಮೆಂಟ್ ಆಫೀಸರಿಗಳು ಕೊಂಡು ಕೊಳ್ಳಬಹುದು, ಬಂದು ಸಲಕ್ಕೆ ಇಪ್ಪತ್ತು ಪೌಂಡುಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲ್‌ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡ್‌ನ್ ಸೂಪರ್‌ಟೆಂಡೆಂಟರ ದೆಕೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೆ ಕೊಂಡು ಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಬಂದಕ್ಕೆ ರೂ. 4—8—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 8—8—0; ಬಂದು ಪೌಂ ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟಾನಿಕಲ್ ಗಾರ್ಡ್‌ನ್ ಸೂಪರ್‌ಟೆಂಡೆಂಟರು ಇದರಡೀ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಬದಿಗಿಸ ಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿ ಬಂದಕ್ಕೆ ರೂ. 5—8—0, ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 10—8—0, ಬಂದು ಪೌಂ ವುಳ್ಳ ಡಬ್ಬಿಗೆ 20 ರೂಪಾಯಿ. ಈ ಔಷಧವು, ಕಲ್‌ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯರ್ ನೇಟಿವ್ ಮರ್ಚಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತಿನೊಂದಿಗೆ ದರ 4 ವ 8 ಔನ್ಸ್ ತಗರದ ಡಬ್ಬೀಗೆ ಎಂಟುಆಣೆ ಟಪ್ಪಾಲ್ ಹಾಸಲೂ, ಬಂದು ಪೌಂ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.